# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 1414/2023

| | | | |
|---|---|---|---|
| ಸಾಕ್ಷಿಯ ಹೆಸರು | ಃ ಮಂಜುನಾಥ ಎಮ್ ಎ | ಸಿ.ಡಬ್ಲ್ಯು | ಃ 10 |
| ತಂದೆ ಹೆಸರು | ಃ ಆನಂದ್ | ಪಿ.ಡಬ್ಲ್ಯು | ಃ 08 |
| ವಯಸ್ಸು | ಃ 48 **ವರ್ಷ** | ಪ್ರಮಾಣೀಕರಿಸಿದ ದಿಃ | 21/08/2024 |
| ವೃತ್ತಿ | ಃ ಸಿ ಹೆಚ್.ಸಿ., ಹೊಳೆನರಸೀಪುರ ಗ್ರಾಮಾಂತರ | | |
| ವಾಸ | ಃ ಹೊಳೆನರಸೀಪುರ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು ಜುಲೈ 2023 ರಿಂದ ಇಲ್ಲಿಯವರೆಗೆ ಹೊಳೆನರಸೀಪುರ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿನಾಂಕಃ19.06.2023 ರಂದು ನಾನು ರಾತ್ರಿ ಕರ್ತವ್ಯದಲ್ಲಿದ್ದಾಗ ಚಾ ಸಾ 2 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಮೊಕದಮ್ಮೆ ಸಂ.69/2023 ಕಲಂ 341, 323, 504 ಮತ್ತು ರಡ್ ವಿಥ 149 ಐಪಿ ಸಿ ರೀತ್ಯಾ ಆರೋಪಿ-1 ರಿಂದ 4ರವರ ವಿರುದ್ದ ಪ್ರಕರಣವನ್ನು ಸದರಿ ದಾಖಲು ಮಾಡಿ ಸದರಿ ಪ್ರ.ವ.ವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಪ್ರ.ವ.ವರದಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರ.ವ.ವರದಿಯನ್ನು ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-1 ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

3. ದಿನಾಂಕಃ 20.06.2023 ರಂದು ಕೃತ್ಯ ಸ್ಥಳವಾದ ಲಕ್ಕೂರು ಗ್ರಾಮಕ್ಕೆ ಸಮಯ ಬೆಳಿಗ್ಗೆ 9.45 ಗಂಟೆಗೆ ಭೇಟೀ ನೀಡಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ಚಾಸಾ-2 ರವರು ಕೃತ್ಯ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪಂಚರಾದ ಚಾಸಾ-7 ಮತ್ತು 8 ರವರಿಗೆ ಪ್ರಕರಣದ ಬಗ್ಗೆ ವಿವರಸಿ ಅವರಿಗೆ ನೋಟಿಸನ್ನು ಜಾರಿ ಮಾಡಿ ಅವರುಗಳ ಸಮಕ್ಷಮ ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿ ಹಾಗೂ ಮಹಜರು ಕ್ರಮವನ್ನು ಜರುಗಿಸಿ ಕೃತ್ಯ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತೇನೆ. ನಂತರ ಠಾಣಾ ಪಿ ಸಿ 662 ರ ರಘು ರವರ ಮೂಲಕ ಛಾಯ ಚಿತ್ರ ತೆಗೆಸಿರುತ್ತೇನೆ. ಕೃತ್ಯ ಸ್ಥಳದ ಸಮಯದಲ್ಲಿ ತೆಗೆದ ಛಾಯಾಚಿತ್ರಗಳಿಗೆ ಕಲಂ 65 ಬಿ ಪ್ರಮಾಣ ಪತ್ರಯನ್ನು ಲಗ್ಗತಿಸಿರುತ್ತೇನೆ. ಸಾಕ್ಷಿ ನಿಪಿ-2 ಸ್ಥಳ ಮಹಜರ್ ನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಲಂ 65 ಬಿ ದೃಡಿಕರಣ ಪತ್ರವನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 7 ಎಂದು ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು.

4. ದಿನಾಂಕ 25.06.2023 ರಂದು ಒಂದರಿಂದ ನಾಲ್ಕನೇ ಆರೋಪಿಗಳಿಗೆ ಸಿ ಆರ್ ಪಿ ಸಿ ಕಲಂ 41 ರ ನೋಟೀಸನ್ನು ಜಾರಿ ಮಾಡಿ ಅವರನ್ನು ಠಾಣೆಯಲ್ಲಿ ವಿಚಾರಿಸಿರುತ್ತೇನೆ. ಸಾಕ್ಷಿಗೆ ನಾಲ್ಕು ಸಿ ಆರ್ ಪಿ ಸಿ ಕಲಂ 41 ರ ನೋಟೀಸಗಳನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ನಿ ಪಿ 8 ರಿಂದ ನಿ ಪಿ 11 ಎಂದು ಮತ್ತು ಸಹಿಗಳನ್ನು ನಿ ಪಿ 8(ಎ ) ರಿಂದ ನಿ ಪಿ 11(ಎ) ಎಂದು ಗುರುತಿಸಲಾಯಿತು.

5. ನಂತರ ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಾ ಸರಾರ 1 ರವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ಚಾ ಸಾ 2, ಚಾಸಾ 3, ಚಾ ಸಾ 4, ಚಾ ಸಾ 5 ಚಾ ಸಾ 6 ಮತ್ತು ಚಾ ಸಾ 7 ರವರನ್ನು ಬರಮಾಡಿಕೊಂಡು ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ಅವರ ಹೇಳಿಕೆಗಳನ್ನು ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಚಾ ಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆ ಹೊಳೆನರಸೀಪುರ ಕೊಡುವಂತೆ ಮನವಿ ಪತ್ರ ನೀಡಿ ಸ್ವೀಕೃತಿ ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 12 ಎಂದು ಸಹಿಯನ್ನು ನಿ ಪಿ 12 (ಎ) ಎಂದು ಗುರುತಿಸಲಾಯಿತು. ದಿನಾಂಕ 15.07.2023 ರಂದು ಚಾ ಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಯಿಂದ ಪಡೆದು ಪರಿಶಿಲಿಸಲಾಗಿ, ಚಾ ಸಾ 1 ರವರಿಗೆ ತೀವ್ರ ಮತ್ತು ಸಾಧ ಸ್ವರೂಪದ ಗಾಯಗಳಾಗಿರುತ್ತವೆ ಎಂದು ನಮೂದಾಗಿದ್ದು ಅದನ್ನು ಪ್ರಕರಣದ ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ದಿನಾ ತನಿಖೆಯನ್ನು ಪೂರ್ಣ ಗೊಳಿಸಿ ಒಂದರಿಂದ ನಾಲ್ಕನೇ ಆರೋಪಿಗಳ ಮೇಲೆ ದೋಷಾರೋಪಣಾ ಪಟ್ಟಿಯಲ್ಲಿ ಐದನೇ ಆರೋಪಿಯ ಮೇಲೆ ಯಾವುದೇ ಆರೋಪಿ ಸಾಬೀತಾಗಾದ ಕಾರಣ ಅವರನ್ನು ದೋಷಾರೋಪಣಾ ಪಟ್ಟಿಯಿಂದ ಕೈಬಿಟ್ಟು ಚಾ ಸಾ 1 ರವರಿಗೆ ತೀವ್ರ ಸ್ವರೂಪದ ಗಾಯಗಳಾದ ಕಾರಣ ಕಲಂ 325 ಐಪಿ ಸಿ ಯನ್ನು ಅಳವಡಿಸಿ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಮತಿ ಸಿ ಜೆ ಕೆ ವಕೀಲರಿಂದಃ

ನಿ ಪಿ 1 ಗಣಕೀಕೃತ ದೂರನ್ನು ಚಾ ಸಾ 2 ರವರು ಒಬ್ಬರೇ ಬಂದು ನೀಡಿದ್ದರು. ಸದರಿ ದೂರನ್ನು ಎಲ್ಲಿ ಟೈಪ್ ಮಾಡಿಸಿಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ಠಾಣಾ ಪಿ ಸಿ 662 ಸ್ಥಳ ಮಹಜರ್ ಗೆ ಹೋಗಿದ್ದೇವು. ನಿ ಪಿ 2 ಸ್ಥಳ ಮಹಜರ್ ನ್ನು ಬೆಳಿಗ್ಗೆ 10..00 ರಿಂದ 11.00 ಗಂಟೆಯವರೆಗೆ ನಾನೇ ಬರೆದಿರುತ್ತೇನೆ. ನಾನು ಪಂಚರಿಗೆ ಲಿಖಿತ ನೋಟಿಸನ್ನು ಜಾರಿ ಮಾಡಿದ್ದೇನೆ. ಸದರಿ ಸ್ಥಳ ಪಂಚನಾಮೆಗೆ ಚಾ ಸಾ 2 ರವರು ಸ್ಥಳ ತೋರಿಸಿರುತ್ತಾರೆ. ನಿ ಪಿ 7 ರಲ್ಲಿ ಯಾವ ಕ್ಯಾಮಾರ ದಿಂದ ಛಾಯಚಿತ್ರಗಳನ್ನು ತೆಗದಿದ್ದು ಎಂದು ನಮೂದಿಸಿದ್ದೇನೆ. ಸಾಮಾನ್ಯವಾಗಿ ಯಾವುದೇ ಛಾಯಚಿತ್ರ ತೆಗೆದರು ಅದರಲ್ಲಿ ಯಾವ ಕಂಪೆನಿಯ ಕ್ಯಾಮಾರ ಮತ್ತು ಸಮಯ ನಮೂದಾಗುತ್ತದೆ ಎಂದರೆ ಸರಿಯಲ್ಲ. ನಾನು ಚಾ ಸಾ 1 ರವರ ಹೇಳಿಕೆಯನ್ನು ಮದ್ಯಾಹ್ನ 2.00 ರಿಂದ 2.45 ರವರಗೆ ಆಸ್ಪತ್ರೆಯಲ್ಲಿ ಪಡೆದಿದ್ದೇನೆ.

2. ನಾನು ಯಾವುದೇ ಗಾಯಾಳು ಹೇಳಿಕೆ ಮತ್ತು ಮರು ಹೇಳಿಕೆ ಪಡೆದಿಲ್ಲ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮಹಜರ್ ಮಾಡಿಲ್ಲ, ಠಾಣೆಯಲ್ಲಿಯೇ ನಕ್ಷೆ ತಯಾರಿಸಿದ್ದೇನೆ , ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ತಯಾರಿಸಿದ್ದೇನೆ ಮತ್ತು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಮುಕ್ತಾಯ:</u>

<u>ಮರು ವಿಚಾರಣೆ ಇಲ್ಲ:</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ